**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 06.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ 1 ನೇ ಅರ್ಜಿದಾರಳಾಗಿದ್ದೇನೆ.

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ನಾನು ನನ್ನ ಅರ್ಜಿಗೆ ಸಂಬಂಧಿಸಿದಂತೆ ದೂರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.1 ಎಂದು, ಎಫ್ ಐ ಆರ್ ನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.2 ಎಂದು, ಸ್ಥಳ ಪಂಚನಾಮೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.3 ಎಂದು, ಸ್ಥಳ ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.4 ಎಂದು, ಐಎಂವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.5 ಎಂದು, ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು, ಎಂವಿಸಿ ನಂ.10/2021 C/w 11/2021 ರ ತೀರ್ಪಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು, ನೋಟರಿಯವರು ದೃಢೀಕರಿಸಿದ ಮೂರು ಆಧಾರ ಕಾರ್ಡ ನಕಲುಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಪಿ.8 ರಿಂದ 10 ಎಂದು, memorandum of post mortem

examination ನ ಟ್ರೂ ಕಾಪಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.11 ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರನ್ನು ಕೂಗಿ ಕರೆಸಲಾಗಿ ಅವರು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಹಾಗೂ ಲಿಖಿತ ತಕರಾರನ್ನು ಸಲ್ಲಿಸದಿರುವ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು).**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಂ ಪಿ ಟಿ ವಕೀಲರಿಂದಃ**

ನಾನು 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸಾಕ್ಷಿ ಅಷ್ಟೇನು ಬರುವುದಿಲ್ಲ ಸ್ವಲ್ಪ ಸ್ವಲ್ಪ ಬರುತ್ತದೆ ಎನ್ನುತ್ತಾರೆ. ನಾನು ಈ ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರಪಡಿಸಿದ್ದು ಆ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ಈ ಘಟನೆಯ ಬಗ್ಗೆಯೂ ಕೂಡ ನನಗೆ ಮಾಹಿತಿ ಇದೆ ಎಂದರೆ ಸರಿ. ಆ ದಿನ ಕಾರ ನಂ.ಕೆಎ-63/ಎಂ-2651 ಇದರಲ್ಲಿ ನಾಲ್ಕು ಮಂದಿ ಹೋಗಿದ್ದರು ಎಂದರೆ ಸರಿ. ಸದರಿ ಕಾರಿನಲ್ಲಿ ಇಬ್ಬರು ಹುಡುಗರು ಹಾಗೂ ಇಬ್ಬರು ಹುಡುಗಿಯರು ಹೋಗಿದ್ದರು ಎಂದರೆ ಸರಿ. ಸದರಿಯವರು ಹುಂಚಳ್ಳಿ ಫಾಲ್ಸ ನೋಡಲು ಪಿಕ್ನಿಕ್ ಗೆಂದು ಹೋಗಿದ್ದರು ಎಂದರೆ ಸರಿ. ಆ ನಾಲ್ಕು ಜನರು ಎಂದರೆ ಅಕ್ಷತಾ ಸಿದ್ದಯ್ಯ ಹಿರೇಮಠ, ರೋಣಿತ ಶೋಭಿತ, ಸುಷ್ಮಾ ಲಕ್ಶ್ಮೀಕಾಂತ ಸಾಗರ, ನಿಶ್ಕಿಲ್ ಮೃತ್ಯುಂಜಯ ಹಿರೇಮಠ ಎಂದರೆ ಸರಿ. ಸದರಿ ನಿಶ್ಕಿಲ್ ನನ್ನ ಮಗ ಎಂದರೆ ಸರಿ. ಸದರಿ ನಾಲ್ಕು ಮಂದಿ 18 ರಿಂದ 20 ವರ್ಷದ ಆಸುಪಾಸಿನವರು ಎಂದರೆ ಸಾಕ್ಷಿ ನನ್ನ ಮಗ ಮಾತ್ರ 22 ವರ್ಷದವನು ಎನ್ನುತ್ತಾರೆ. ನನ್ನ ಮಗನಿಗೆ 22 ವರ್ಷ ಆಗಿತ್ತು ಎಂದು ತೋರಿಸಲು ನ್ಯಾಯಾಲಯದ

ಮುಂದೆ ನಾನು ಆತನ ಶಾಲಾ ದಾಖಲಾತಿ ದೃಢೀಕರಣ ಪತ್ರವನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಅಂತಿಮ ವರದಿಯಲ್ಲಿ ನನ್ನ ಮಗನ ವೃತ್ತಿ ಹೊಟೇಲ್ ವ್ಯಾಪಾರ ಎಂಬುದಾಗಿ ಬರೆಯಲಾಗಿದೆ ಎಂದರೆ ಸರಿ. ನನ್ನ ಮಗ ಚಾಲಕ ಕೆಲಸ ಮಾಡುತ್ತಿದ್ದ ಎಂದು ಹೇಳಿದ್ದು ಅದನ್ನು ರುಜುವಾತುಪಡಿಸಲು ಆತನ ಚಾಲನಾ ಪರವಾನಿಗೆ ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. ಪೊಲೀಸರು ಅಂತಿಮ ವರದಿಯನ್ನು ನನ್ನ ಮಗನ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅಂತಿಮ ವರದಿಯಲ್ಲಿ ನನ್ನ ಮಗ ಚಾಲನಾ ಪರವಾನಿಗೆ ಇಲ್ಲದೇ ಗಾಡಿ ಚಲಾಯಿಸುತ್ತಿದ್ದ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಆತನ ಚಾಲನಾ ಪರವಾನಿಗೆ ಇತ್ತು ಎನ್ನುತ್ತಾರೆ. ಅಂತಿಮ ವರದಿಯನ್ನು ನಾನಾಗಲೀ ನನ್ನ ಯಜಮಾನರಾಗಲೀ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ನನ್ನ ಮಗನ ಚಾಲನಾ ಪರವಾನಿಗೆಯ ನಕಲನ್ನು ಆರ್ ಟಿ ಓ ಕಡೆಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರಪಡಿಸಲು ನನಗೇನು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಆ ದಿನ ನನ್ನ ಮಗ ಗಾಡಿ ಮಾಲೀಕರ ಕಡೆಯಿಂದ ಗಾಡಿಯನ್ನು ಅಂದರೆ 1 ನೇ ಎದುರುದಾರರಿಂದ ಪಿಕ್ನಿಕ್ ಗಾಗಿ ತೆಗೆದುಕೊಂಡು ಹೋಗಿದ್ದ ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮಗ ಗಾಡಿ ಮಾಲೀಕರ ಬಳಿ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಮಾಡಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ತಾವು ಹಾಜರಪಡಿಸಿರುವ ನಿಪಿ.1 ರಿಂದ 11 ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿ ಯಾವುದು ಇದೆ ನೋಡಿ ಎಂದರೆ ಸಾಕ್ಷಿ ನನಗೆ ನೋಡಲು ಬರುವುದಿಲ್ಲ ಎನ್ನುತ್ತಾರೆ. ಕಾರ ಮಾಲೀಕರು ನನ್ನ ಮಗನಿಗೆ ತಿಂಗಳಿಗೆ 25 ಸಾವಿರ ರೂ. ಸಂಬಳ ಹಾಗೂ 300/- ರೂ. ದಿನಭತ್ಯೆ ಕೊಡುತ್ತಿದ್ದರು ಎಂದು ಹೇಳಿದ್ದು ಅದಕ್ಕೆ

ಸಂಬಂಧಿಸಿದಂತೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ನನ್ನ ಮಗ ಹಾಗೂ 1 ನೇ ಎದುರುದಾರರ ನಡುವೆ ಕೆಲಸಗಾರ ಹಾಗೂ ಮಾಲೀಕರ ಸಂಬಂಧ ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಆ ಘಟನೆ ಕೆಲಸದ ವ್ಯಾಪ್ತಿಯಲ್ಲಿ ಆಗಿಲ್ಲ ಎಂದರೆ ಸಾಕ್ಷಿ ಆತ ಕೆಲಸಕ್ಕೆ ಹೋಗಿದ್ದ ನಂತರ ಏನಾಯಿತೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಂತ್ಯ ಸಂಸ್ಕಾರಕ್ಕೆ ಒಂದು ಲಕ್ಷ ರೂ. ಖರ್ಚಾಗಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ವಿಮಾ ಕಂಪನಿಯವರಿಗೆ ನಾವು ಯಾವುದೇ ನೋಟೀಸ್ ಕೊಟ್ಟಿಲ್ಲ ಹಾಗೂ ಪತ್ರ ವ್ಯವಹಾರ ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಚಾಲನಾ ಪರವಾನಿಗೆ ಇಲ್ಲದೇ ಗಾಡಿ ಚಲಾಯಿಸಿದ್ದರಿಂದ ವಿಮಾ ಕಂಪನಿಯವರು ನಮಗೆ ಯಾವುದೇ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**